DATE : 23/12/2019
DEPARTMENT / SUBJECT:
NAME OF THE NEWS PAPER:

# ಉಪ ಚುನಾವಣೆ ಗೆದ್ದ ಶಾಸಕರಿಂದ ಪ್ರಮಾಣವಚನ

## 12 ಬಿಜೆಪಿ + 1 ಪಕ್ಷೇತರ ಶಾಸಕರಿಗೆ ಪ್ರಮಾಣವಚನ ಬೋಧಿಸಿದ ಸ್ಪೀಕರ್ | ಕಾಂಗ್ರೆಸ್ ಸದಸ್ಯರು ಇನ್ನೊಂದು ದಿನ ಪದಗ್ರಹಣ

• **ಕನ್ನಡಪ್ರಭ ವಾರ್ತೆ** ಬೆಂಗಳೂರು 23/12/19

ಇತ್ತೀಚೆಗೆ ನಡೆದ 15 ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಆಯ್ಕೆಯಾದವರ ಪೈಕಿ 13 ಶಾಸಕರು ವಿಧಾನಸಭಾ ಸದಸ್ಯರಾಗಿ ಭಾನುವಾರ ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ವಿಧಾನಸಭೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಸಚಿವರ ಸಮ್ಮುಖದಲ್ಲಿ ಕುಟುಂಬದ ಸದಸ್ಯರು, ಪಕ್ಷದ ಮುಖಂಡರು, ಅಭಿಮಾನಿಗಳು, ಕಾರ್ಯಕರ್ತರು ಘೋಷಣೆ, ಸಂಭ್ರಮಗಳ ಮಧ್ಯೆ ಬಿಜೆಪಿಯ 12 ಹಾಗೂ ಒಬ್ಬ ಪಕ್ಷೇತರ ಶಾಸಕರು ಪ್ರಮಾಣ ವಚನ ಸ್ವೀಕರಿಸಿದರು. ಕಾಂಗ್ರೆಸ್ಸಿನ ಇಬ್ಬರು ಶಾಸಕರು ಆಗಮಿಸಿರಲಿಲ್ಲ.

ಬಿಜೆಪಿಯ ಮಹೇಶ್ ಕುಮಟಳ್ಳಿ (ಅಥಣಿ), ಶ್ರೀಮಂತ ಪಾಟೀಲ್ (ಕಾಗವಾಡ), ರಮೇಶ್ ಜಾರಕಿಹೊಳಿ (ಗೋಕಾಕ್), ಶಿವರಾಂ ಹೆಬ್ಬಾರ್ (ಯಲ್ಲಾಪುರ), ಬಿ.ಸಿ.ಪಾಟೀಲ್ (ಹಿರೇಕೆರೂರು), ಅರುಣಕುಮಾರ್ (ರಾಣೆಬೆನ್ನೂರು), ಆನಂದಸಿಂಗ್ (ವಿಜಯನಗರ), ಡಾ.ಕೆ.ಸುಧಾಕರ್ (ಚಿಕ್ಕಬಳ್ಳಾಪುರ), ಬಿ.ಎ.ಬಸವರಾಜ್ (ಕೆ.ಆರ್.ಪುರ), ಎಸ್.ಟಿ. ಸೋಮಶೇಖರ್ (ಯಶವಂತಪುರ), ಕೆ. ಗೋಪಾಲಯ್ಯ (ಮಹಾಲಕ್ಷ್ಮೀ ಲೇಔಟ್), ನಾರಾಯಣಗೌಡ (ಕೆ.ಆರ್.ಪೇಟೆ) ಹಾಗೂ ಪಕ್ಷೇತರಅಭ್ಯರ್ಥಿಶರತ್ ಬಚ್ಚೇಗೌಡ(ಹೊಸಕೋಟೆ) ಪ್ರಮಾಣ ವಚನ ಸ್ವೀಕರಿಸಿದರು. ಕಾಂಗ್ರೆಸ್ ಪಕ್ಷದ ಮಂಜುನಾಥ್ (ಹುಣಸೂರು) ಹಾಗೂ ರಿಜ್ವಾನ್ ಅರ್ಷದ್ (ಶಿವಾಜಿನಗರ) ಅವರು ಮತ್ತೊಂದು ದಿನ ಪ್ರತ್ಯೇಕವಾಗಿ ಪ್ರಮಾಣ ಸ್ವೀಕರಿಸಲು ನಿರ್ಧರಿಸಿದ್ದಾರೆ ಎನ್ನಲಾಗಿದೆ.

ಕಾರ್ಯಕರ್ತರು, ಅಭಿಮಾನಿಗಳಿಂದ ತುಂಬಿದ್ದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೊದಲು 'ವಂದೇ ಮಾತರಂ' ಗೀತೆಯ. ನಂತರ ವಿಧಾನಸಭೆಯ ಕಾರ್ಯದರ್ಶಿ ವಿಶಾಲಾಕ್ಷಿ ಅವರು ಸದಸ್ಯರ ಹೆಸರನ್ನು ಉಲ್ಲೇಖಿಸಿ ಪ್ರಮಾಣ ವಚನಕ್ಕೆ ಆಹ್ವಾನಿಸಿದರು. ಪ್ರಮಾಣ ವಚನ ಸ್ವೀಕಾರದ ನಂತರ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಸದಸ್ಯರಿಗೆ ಪುಷ್ಪಗುಚ್ಛ, ಸಂವಿಧಾನದ ಪುಸ್ತಕ ಹಾಗೂ ಸದನದ ನಿಯಮಾವಳಿಯ ಪುಸ್ತಕವನ್ನು ನೀಡಿ ಅಭಿನಂದಿಸಿದರು. ಸಚಿವರಾದ ಬಸವರಾಜ ಬೊಮ್ಮಾಯಿ, ಆರ್.ಅಶೋಕ್, ಎಸ್. ಸುರೇಶಕುಮಾರ್, ಎಚ್.ನಾಗೇಶ್, ಮಾಜಿ ಶಾಸಕ ಸಿ.ಪಿ.ಯೋಗೇಶ್ವರ್ ಸೇರಿದಂತೆ ಅನೇಕ ಮುಖಂಡರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

**ಇಷ್ಟ ದೇವತೆಗಳ ಹೆಸರಲ್ಲಿ ಪ್ರಮಾಣ:** ಅರುಣಕುಮಾರ್ ಅವರು ಭಗವಂತ ಹಾಗೂ ಮನೆ ದೇವರು ಕೊಟ್ಟೂರು ಬಸವೇಶ್ವರ ಹೆಸರಿನಲ್ಲಿ, ಬಿ.ಸಿ.ಪಾಟೀಲ್ ಅವರು ಭಗವಂತ ಮತ್ತು ಜಗಜ್ಯೋತಿ ಬಸವೇಶ್ವರ ಹೆಸರಿನಲ್ಲಿ, ಬಿ.ಎಸ್. ಬಸವರಾಜ್ ಮತ್ತು ಎಸ್.ಟಿ. ಸೋಮಶೇಖರ್ ಸತ್ಯ ನಿಷ್ಠೆ ಹೆಸರಿನಲ್ಲಿ, ಉಳಿದವರು ಭಗವಂತನ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದು ವಿಶೇಷವಾಗಿತ್ತು.

**ರೇಷ್ಮೆ, ಕೇಸರಿ ವಸ್ತ್ರ, ಫುಲ್ ಸೂಟ್:** ರಾಣೆಬೆನ್ನೂರು ಶಾಸಕ ಬಿ.ಸಿ. ಪಾಟೀಲ್ ಭರ್ಜರಿ ರೇಷ್ಮೆ ಶಾಲು ಧರಿಸಿದ್ದರೆ, ಡಾ.ಕೆ.ಸುಧಾಕರ್ ಸರಳ ಉಡುಪಿನಲ್ಲಿದ್ದರು. ಉಳಿದವರು ಹೆಗಲ ಮೇಲೆ ಕೇಸರಿ ವಸ್ತ್ರ ಧರಿಸಿದ್ದರು. ಆದರೆ ಮೊದಲ ಬಾರಿಗೆ ಪಕ್ಷೇತರ ಶಾಸಕರಾಗಿ ಆಯ್ಕೆಯಾಗಿರುವ ಹೊಸಕೋಟೆ ಕ್ಷೇತ್ರದ ಶಾಸಕ ಶರತ್ ಬಚ್ಚೇಗೌಡ ಅವರು ಕ್ಲೋಸ್ ಕಾಲರ್ ಸೂಟ್ ಧರಿಸಿ ಗಮನ ಸೆಳೆದರು.



ಉಪ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಸದಸ್ಯರು ಭಾನುವಾರ ವಿಧಾನಸೌಧದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಬಳಿಕ ಸಿಎಂ ಯಡಿಯೂರಪ್ಪ, ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ಜೊತೆ ಫೋಟೋ ತೆಗೆಸಿಕೊಂಡರು.

## ಶರತ್ ಮೇಲೆ ಬಿಎಸ್‌ವೈಗೆ ಇನ್ನೂ ಮುನಿಸು

ಬೆಂಗಳೂರು: ತಮ್ಮ ಮಾತನ್ನು ಧಿಕ್ಕರಿಸಿ, ಪಕ್ಷದ ಅಭ್ಯರ್ಥಿಯಾದ ಎಂಟಿಬಿ ನಾಗರಾಜ್ ವಿರುದ್ಧ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದ ಪಕ್ಷೇತರ ಅಭ್ಯರ್ಥಿ ಶರತ್ ಬಚ್ಚೇಗೌಡ ಅವರ ಮೇಲಿನ ಅಸಮಾಧಾನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಲ್ಲಿ ಇನ್ನೂ ಕಡಿಮೆ ಯಾಗದಿರುವುದು ಶಾಸಕರ ಪ್ರಮಾಣವಚನ ಸಮಾರಂಭದಲ್ಲಿ ಕಂಡುಬಂದಿತು. ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಭಾನುವಾರ ನಡೆದ ನೂತನ ಶಾಸಕರ ಪ್ರಮಾಣ ವಚನದ ನಂತರ ಶರತ್ ಬಚ್ಚೇಗೌಡ ಮಾತನಾಡುತ್ತಿದ್ದ ವೇಳೆ ಮುಖ್ಯಮಂತ್ರಿ ಯಡಿಯೂರಪ್ಪ ಅವರು ನಿರ್ಗಮಿಸುವುದನ್ನು ಕಂಡು ಲಗುಬಗೆಯಿಂದ ಅವರ ಬಳಿ ತೆರಳಿದರು. ಆದರೆ ಸಿಎಂ ಅವರನ್ನು ನೋಡಿಯೂ ನೋಡದಂತೆ ಮುಂದೆ ಸಾಗಿದರು. ಅವರ ಹಿಂದೆ ಬರುತ್ತಿದ್ದ ಸಚಿವ ಅಶೋಕ್ ಅವರನ್ನು ನೋಡಿದ ಶರತ್ ಮುಗುಳ್ನಕ್ಕು ಮತ್ತೆ ಮಾಧ್ಯಮ ಪ್ರತಿನಿಧಿಗಳತ್ತ ವಾಪಸ್ ಬಂದು ಪ್ರತಿಕ್ರಿಯೆ ನೀಡತೊಡಗಿದರು.

## ಬಿಜೆಪಿಗೆ ನನ್ನ ಅಗತ್ಯ ಇಲ್ಲ: ಶರತ್

ಬೆಂಗಳೂರು: ಬಿಜೆಪಿಗೆ ಸ್ಥಿರ ಸರ್ಕಾರ ನಡೆಸಲು ಬೇಕಾದ ಸಂಖ್ಯಾಬಲವಿದೆ. ಹೀಗಾಗಿ ನನ್ನ ಅಗತ್ಯವಿಲ್ಲ. ರಾಷ್ಟ್ರೀಯ ಪಕ್ಷ ಅಥವಾ ಪ್ರಾದೇಶಿಕ ಪಕ್ಷಕ್ಕೆ ಬೆಂಬಲಿಸುವ ಬಗ್ಗೆ ಕ್ಷೇತ್ರದ ಮುಖಂಡರು, ಕಾರ್ಯಕರ್ತರ ಜೊತೆ ನಿರ್ಧರಿಸಿ ಮುಂದಿನ ನಿರ್ಧಾರ ತೆಗೆದುಕೊಳ್ಳುತ್ತೇನೆ ಎಂದು ಹೊಸಕೋಟೆ ಕ್ಷೇತ್ರದ ಪಕ್ಷೇತರ ಶಾಸಕ ಶರತ್ ಬಚ್ಚೇಗೌಡ ಪ್ರತಿಕ್ರಿಯಿಸಿದ್ದಾರೆ. ಭಾನುವಾರ ಪ್ರಮಾಣ ವಚನ ಸ್ವೀಕರಿಸಿದ ನಂತರ ಮಾತನಾಡಿ, ಇಷ್ಟು ದಿನ ಬಿಜೆಪಿ ಗರಡಿಯಲ್ಲಿ ಬೆಳೆದಿದ್ದೇನೆ. ಈಗ ಒಂದು ರೀತಿ ವಿಚಿತ್ರ ವಾತಾವರಣದಲ್ಲಿದ್ದೇನೆ ಎಂದರು. ಇದೇ ವೇಳೆ, ಮುಂದಿನ ರಾಜಕೀಯ ನಿರ್ಧಾರದ ಬಗ್ಗೆ ಕ್ಷೇತ್ರದ ಕಾರ್ಯಕರ್ತರ ಜೊತೆ ಕುಳಿತು ಚರ್ಚಿಸಿ ನಿರ್ಧರಿಸುವೆ ಎಂದರು.

## ಯಾವುದೇ ಖಾತೆ ಕೇಳಿಲ್ಲ

ಸಂಪುಟ ವಿಸ್ತರಣೆ, ಸಚಿವ ಸ್ಥಾನ ನೀಡುವುದು ಮುಖ್ಯಮಂತ್ರಿಗಳ ನಿರ್ಧಾರಕ್ಕೆ ಬಿಟ್ಟಿದ್ದು. ನನಗೆ ಯಾವ ಖಾತೆ ಬೇಕೆಂದು ಬೇಡಿಕೆ ಇಟ್ಟಿಲ್ಲ. ಯಾರಾದರೂ ಕೇಳಿದಾಗ ಮಾತ್ರ ಇಂತಹ ಖಾತೆ ಬೇಕೆಂದು ಹೇಳಬಹುದು. ಸದ್ಯಕ್ಕೆ ನಾನು ಶಾಸಕ ಅಷ್ಟೇ.

• **ಎಸ್.ಟಿ. ಸೋಮಶೇಖರ್**
ಯಶವಂತಪುರ ಕ್ಷೇತ್ರದ ಶಾಸಕ

## ನನಗೆ ಮಂತ್ರಿಗಿರಿ ಸಿಗುತ್ತದೆ

ನೂತನ ಶಾಸಕನಾಗಿ ಇಂದು ಪ್ರಮಾಣವಚನ ಸ್ವೀಕಾರ ಮಾಡಿದ್ದೇನೆ. ದೇಶದಲ್ಲಿ ನಡೆಯುತ್ತಿರುವ ಒಂದಷ್ಟು ವಿದ್ಯಮಾನಗಳಿಂದ ಸಂಪುಟ ವಿಸ್ತರಣೆಗೆ ಸಮಯ ನಿಗದಿಯಾಗಿಲ್ಲ. ಆದಷ್ಟು ಬೇಗ ಸಂಪುಟ ವಿಸ್ತರಣೆ ಆಗಲಿದೆ. ಮುಖ್ಯಮಂತ್ರಿ ನನಗೆ ಸಚಿವ ಸ್ಥಾನ ನೀಡಲಿದ್ದಾರೆ.

• **ಡಾ.ಕೆ. ಸುಧಾಕರ್** ಚಿಕ್ಕಬಳ್ಳಾಪುರ ಶಾಸಕ